ಉದಯವಾಣಿ

# ಕರ್ನಾಟಕ ರಾಜ್ಯ ಬಾಹ್ಯಾಕಾಶ ಕ್ಷೇತ್ರದ ತವರು

## ತಾಂತ್ರಿಕ ವಿದ್ಯಾಲಯದಲ್ಲಿ ಕೇಂದ್ರ ವಿಜ್ಞಾನ, ತಂತ್ರಜ್ಞಾನ ಸಚಿವ ಡಾ.ಹರ್ಷವರ್ಧನ ಅಭಿಮತ



ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ ಸೋಮವಾರ ಸೆಂಟರ್ ಆಫ್ ಎಕ್ಸಲೆನ್ಸಿ ಕೇಂದ್ರಕ್ಕೆ ಕೇಂದ್ರ ಸಚಿವ ಡಾ. ಹರ್ಷವರ್ಧನ ಚಾಲನೆ ನೀಡಿದರು. ಸಚಿವ ಡಿ.ವಿ.ಸದಾನಂದ ಗೌಡ, ಡಾ.ಎಚ್.ಸಿ. ನಾಗರಾಜ್, ಶಾಸಕ ಎಸ್.ಆರ್. ವಿಶ್ವನಾಥ್ ಇತರರು ಇದ್ದರು.

**ಬೆಂಗಳೂರು:** ವೈಮಾನಿಕ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಹೆಚ್ಚಿರುವ ಕರ್ನಾಟಕ, ದೇಶದ ಬಾಹ್ಯಾಕಾಶ ಕ್ಷೇತ್ರದ ತವರು ಮನೆ ಎನಿಸಿದೆ ಎಂದು ಕೇಂದ್ರ ವಿಜ್ಞಾನ, ತಂತ್ರಜ್ಞಾನ ಸಚಿವ ಡಾ.ಹರ್ಷವರ್ಧನ ಅಭಿಪ್ರಾಯ ವ್ಯಕ್ತಪಡಿಸಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ ಸೋಮವಾರ ಸೆಂಟರ್ ಆಫ್ ಎಕ್ಸಲೆನ್ಸಿ (ಏರೋಸ್ಪೇಸ್ ಎಂಜಿನಿಯರಿಂಗ್ ಮತ್ತು ಇಂಟರ್‌ನೆಟ್ ಆಫ್ ಥಿಂಗ್ಸ್) ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು.

ಬೆಂಗಳೂರು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನದ ನಗರ ಮಾತ್ರವಲ್ಲ. ವೈಮಾನಿಕ ತಂತ್ರಜ್ಞಾನ ಕ್ಷೇತ್ರದ ನವಾನ್ವೇಷಣೆಗಳಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ವೈಮಾನಿಕ ತಂತ್ರಜ್ಞಾನ ನಗರವಾಗಿ ರೂಪುಗೊಂಡಿದೆ. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೈಗಾರಿಕಾ ತರಬೇತಿಯೂ ಅಗತ್ಯವಾಗಿದೆ. ಶಿಕ್ಷಣ ಸಂಸ್ಥೆಗಳೇ ಕೈಗಾರಿಕಾ ಘಟಕ ಹೊಂದಿರುವುದು ಇನ್ನಷ್ಟು ಅನುಕೂಲವಾಗಲಿದೆ ಎಂದರು.

ಯುವ ಪೀಳಿಗೆ ತಮ್ಮ ಪ್ರತಿಭೆ ಹಾಗೂ ಕೌಶಲ್ಯ ತೋರ್ಪಡಿಸಲು ಈ ಕೇಂದ್ರಗಳು ವೇದಿಕೆಯಾಗಲಿದೆ. ಉಡಾನ್ ಯೋಜನೆಯಡಿ ವಿದ್ಯಾರ್ಥಿಗಳು ಸಣ್ಣ ಪ್ರಮಾಣದ ಏರ್‌ಕ್ರಾಫ್ಟ್ ಉತ್ಪಾದನೆಗೆ ಹೆಚ್ಚಿನ ಗಮನ ಕೊಡಬೇಕು. ಬಡವರು ಕೈಗೆಟುಕುವ ದರದಲ್ಲಿ ವಿಮಾನಯಾನ ಮಾಡಲು ಸಹಕಾರಿಯಾಗಲಿವೆ ಎಂದು ಅಭಿಪ್ರಾಯಪಟ್ಟರು.

ವೈಮಾನಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿದ ಮೊದಲ ಹತ್ತು ರಾಷ್ಟ್ರಗಳಲ್ಲಿ ಭಾರತವೂ ಸೇರಿಕೊಂಡಿದೆ. 75 ವರ್ಷಗಳ ಇತಿಹಾಸ ಹೊಂದಿರುವ ಕೌನ್ಸಿಲ್ ಫಾರ್ ಸೈಂಟಿಫಿಕ್ ಆಂಡ್ ಇಂಡಸ್ಟ್ರಿಯಲ್ ರಿಸರ್ಚ್ ಜಗತ್ತಿನ 1200 ಸಂಶೋಧನಾ ಕೇಂದ್ರಗಳ ಪಟ್ಟಿಯಲ್ಲಿ 9ನೇ ಸ್ಥಾನ ಪಡೆದಿದೆ. ಸುನಾಮಿ ಮುನ್ಸೂಚನೆ ಎರಡು ದಿನದ ಮೊದಲೇ ತಿಳಿಯಬಲ್ಲ ಸಾಮರ್ಥ್ಯ ಭಾರತ ಹೊಂದಿದೆ ಎಂದು ವಿಜ್ಞಾನದ ಸಾಧನೆ ವಿವರಿಸಿದರು.

ಕೇಂದ್ರ ಸರ್ಕಾರ ದ್ವಿತೀಯ ಹಾಗೂ ತೃತೀಯ ಹಂತದ ನಗರಗಳಿಗೆ ವಿಮಾನ ಸಂಪರ್ಕ ಕಲ್ಪಿಸಲು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜನಸಾಮಾನ್ಯರ ಸಮಯದ ಉಳಿತಾಯ ಮತ್ತು ರಸ್ತೆ ಸಂಚಾರದ ಒತ್ತಡ ನಿವಾರಣೆಗೆ ಇದು ಅನಿವಾರ್ಯವಾಗಿದೆ. ಈ ರೀತಿಯ ಸಂಶೋಧನೆಗೆ ನಿಟ್ಟೆ ಮೀನಾಕ್ಷಿ ತಾಂತ್ರಿಕ ಸಂಸ್ಥೆ ಆರಂಭಿಸಿರುವ ಸೆಂಟರ್ ಆಫ್ ಎಕ್ಸಲೆನ್ಸಿ ಸಾಕಷ್ಟು ಅನುಕೂಲವಾಗಲಿದೆ ಎಂದು ಶ್ಲಾಘಿಸಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎನ್.ಆರ್. ಶೆಟ್ಟಿ ಮಾತನಾಡಿ, ವೈಮಾನಿಕ ತಂತ್ರಜ್ಞಾನ ಹಾಗೂ ಇಂಟರ್‌ನೆಟ್ ಆಫ್ ಥಿಂಗ್ಸ್ ಕ್ಷೇತ್ರದಲ್ಲಿ ಅತ್ಯಾಧುನಿಕ ಸಲಕರಣೆ ಹಾಗೂ ತಂತ್ರಾಂಶ ಅಳವಡಿಸಿ ಈ ಕೇಂದ್ರ ಸ್ಥಾಪಿಸಲಾಗಿದೆ. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇದು ಅತಿ ಅಗತ್ಯವಾಗಿದೆ. ಕೈಗಾರಿಕಾ ತರಬೇತಿ ಈ ಕೇಂದ್ರದ ಮೂಲಕವೇ ಸಿಗಲಿದೆ ಎಂದರು.

ಜಾಗತಿಕ ವೈಮಾನಿಕ ತಂತ್ರಜ್ಞಾನ ಕ್ಷೇತ್ರದಲ್ಲಿ 2020ರ ವೇಳೆಗೆ ಭಾರತ 3ನೇ ಬೃಹತ್ ರಾಷ್ಟ್ರವಾಗಿ ಬೆಳೆಯಲಿದೆ. 2035ರ ವೇಳೆಗೆ ಜಗತ್ತಿನಲ್ಲಿ ಮೊದಲನೇ ಸ್ಥಾನ ಪಡೆಯಲಿದೆ. ತಜ್ಞರ ಪ್ರಕಾರ ಒಂದು ಬಿಲಿಯನ್ ಎಂಜಿನಿಯರಿಂಗ್ ಪದವೀಧರರಿಗೆ ನೇರ ಉದ್ಯೋಗ ಲಭಿಸಲಿದೆ. ವಿದ್ಯಾರ್ಥಿಗಳುಇದರಲ್ಲಿಸಕ್ರಿಯರಾಗಬೇಕು ಎಂದು ಕರೆಕೊಟ್ಟರು.

ಕೇಂದ್ರ ಅಂಕಿಅಂಶ ಹಾಗೂ ಕಾರ್ಯಕ್ರಮ ಅನುಷ್ಠಾನ ಸಚಿವ ಡಿ.ವಿ.ಸದಾನಂದ ಗೌಡ, ನಿಟ್ಟೆ ಮೀನಾಕ್ಷಿ ತಾಂತ್ರಿಕ ಸಂಸ್ಥೆಯ ಪ್ರಾಂಶುಪಾಲ ಡಾ.ಎಚ್.ಸಿ. ನಾಗರಾಜ್, ಶಾಸಕ ಎಸ್.ಆರ್.ವಿಶ್ವನಾಥ್, ನಿಟ್ಟೆ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ರೋಹಿತ್ ಪೂಂಜಾ, ಡಸಾಲ್ಟ್ ಸಿಸ್ಟಂ ಇಂಡಿಯಾದ ಉಪಾಧ್ಯಕ್ಷ ಲೋಕನಾಥ ಕೆ.ರೆಡ್ಡಿ, ಪಿಟಿಸಿ ಇಂಡಿಯಾದ ಹಿರಿಯ ನಿರ್ದೇಶಕ ಮೋಹನ್ ಹಾಗೂ ಡಿಸ್ಟೆಕ್ ಕಾಂಪಿಟೆನ್ಸಿ ಸರ್ವಿಸ್ಸ್ ಸಂಸ್ಥೆಯ ರಾಹುಲ್ ನಾಯ್ಡು, ಅನುಜ್ ಶರ್ಮಾ ಮೊದಲಾದವರು ಉಪಸ್ಥಿತರಿದ್ದರು.

## ಡಿಸೈನ್-ಇಂಟಿಗ್ರೇಷನ್ ಸೌಲಭ್ಯ ಕೇಂದ್ರಕ್ಕೆ ಚಾಲನೆ

**ಬೆಂಗಳೂರು:** ಸರಸ್ ಕಾರ್ಯಕ್ರಮದಡಿ ತಯಾರಿಸುತ್ತಿರುವ ಲಘು ನಾಗರಿಕ ವಿಮಾನವನ್ನು ಉಡಾನ್ ಯೋಜನೆಯಡಿ ಮುಂದಿನ ಮೂರು ವರ್ಷದಲ್ಲಿ ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಸಿದ್ಧವಾಗಲಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಹರ್ಷವರ್ಧನ ಹೇಳಿದರು.

ನಗರದಲ್ಲಿರುವ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಪರಿಷತ್(ಸಿಎಸ್ಐಆರ್)ನ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಯಲ್ಲಿ (ಎನ್ಎಎಲ್) ಸೋಮವಾರ ಡಿಸೈನ್ ಮತ್ತು ಇಂಟಿಗ್ರೇಷನ್ ಸೌಲಭ್ಯ ಕೇಂದ್ರ ಉದ್ಘಾಟಿಸಿ ಮಾತನಾಡಿದರು.

ಸರಸ್ ಕಾರ್ಯಕ್ರಮದಡಿ ಲಘು ನಾಗರಿಕ ವಿಮಾನ ತಯಾರಿಸುವ ಯೋಜನೆ ದುರಂತವೊಂದರ ನಂತರ ಸಂಪೂರ್ಣ ನಿಂತುಹೋಗಿತ್ತು. ಈಗ ಅದನ್ನು ಪುನಶ್ಚೇತನಗೊಳಿಸುತ್ತಿದ್ದೇವೆ. ವಿಮಾನದ ಪರೀಕ್ಷಾರ್ಥ ಹಾರಾಟ ನಡೆಯುತ್ತಿದೆ. ವಾಣಿಜ್ಯ ಉದ್ದೇಶಕ್ಕೆ ಬೇಕಾದ ಮಾರ್ಪಾಡು ಮತ್ತು ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದೆ. ಮುಂದಿನ ಮೂರು ವರ್ಷದಲ್ಲಿ 19 ಸೀಟಿನ ಲಘು ನಾಗರಿಕ ವಿಮಾನ ವಾಣಿಜ್ಯ ಉದ್ದೇಶಕ್ಕೆ ಸಿದ್ಧವಾಗಲಿದೆ ಎಂದು ವಿವರಿಸಿದರು. ಎನ್ಎಎಲ್ ನಿರ್ದೇಶಕ ಡಾ.ಜಿತೇಂದ್ರ ಜೆ.ಯಾದವ್ ಮೊದಲಾದ ಅಧಿಕಾರಿಗಳು ಉಪಸ್ಥಿತರಿದ್ದರು.



ನಗರದ ಬೇಲೂರಿನಲ್ಲಿರುವ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಪರಿಷತ್ ಪ್ರಯೋಗಶಾಲೆಯಲ್ಲಿ ಇಂಟಿಗ್ರೇಷನ್ ಸೌಲಭ್ಯ ಕೇಂದ್ರವನ್ನು ಕೇಂದ್ರ ಸಚಿವ ಡಾ.ಹರ್ಷವರ್ಧನ ಉದ್ಘಾಟಿಸಿದರು.

## ಮಿನಿ, ಮೈಕ್ರೋ ಯುಎವಿಗಳ ಉತ್ಪಾದನೆಗೆ ಖಾಸಗಿ ಸಹಭಾಗಿತ್ವ: ಡಾ.ಹರ್ಷವರ್ಧನ್

# ಮಾನವರಹಿತ ನೌಕೆ ವಿನ್ಯಾಸ ಕೇಂದ್ರ ಆರಂಭ

■ **ವಿಕ ಸುದ್ದಿಲೋಕ** ಬೆಂಗಳೂರು



**ಬೇಲೂರಿನ ಅತಿ ಸಣ್ಣ ಮಾನವರಹಿತ ನೌಕೆ ವಿನ್ಯಾಸ ಕೇಂದ್ರದಲ್ಲಿ ಕೇಂದ್ರ ಸಚಿವ ಹರ್ಷವರ್ಧನ್ ಅವರು ನೌಕೆಗಳ ಮಾದರಿಗಳನ್ನು ವೀಕ್ಷಿಸಿದರು.**

ಅಗತ್ಯ ಇರುವ ಕಡೆಗಳಲ್ಲಿ ಮಾನವರಹಿತ ಸಣ್ಣ ಮತ್ತು ಅತಿ ಸಣ್ಣ ನೌಕೆಗಳ ಬಳಕೆಗೆ ಸಿಗಲು ಖಾಸಗಿ ಸಂಸ್ಥೆಗಳ ಸಹಭಾಗಿತ್ವದ ಮೊರೆ ಹೋಗುತ್ತೇವೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಹರ್ಷವರ್ಧನ್ ತಿಳಿಸಿದರು.

ಬೇಲೂರಿನಲ್ಲಿರುವ ವೈಮಾಂತರಿಕ್ಷ ಪ್ರಯೋಗ ಶಾಲೆ (ಎನ್‌ಎಎಲ್) ಆವರಣದಲ್ಲಿ ನೂತನ ಸಣ್ಣ ಮತ್ತು ಅತಿ ಸಣ್ಣ ಮಾನವರಹಿತ ನೌಕೆ (ಯುಎವಿ) ವಿನ್ಯಾಸ ಮತ್ತು ಜೋಡಣೆ ಕೇಂದ್ರವನ್ನು ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಪರಿಷತ್‌ನ (ಸಿಎಸ್‌ಐಆರ್) ಉಪಾಧ್ಯಕ್ಷರು ಆಗಿರುವ ಡಾ.ಹರ್ಷವರ್ಧನ್ ಸೋಮವಾರ ಉದ್ಘಾಟಿಸಿ ಮಾಧ್ಯಮದವರೊಂದಿಗೆ ಮಾತನಾಡಿದರು.

''ಇತ್ತೀಚಿನ ವರ್ಷಗಳಲ್ಲಿ ಡ್ರೋನ್ ಮತ್ತು ಯುವವಿಗಳ ಬಳಕೆ ನಾಗರೀಕ ಮತ್ತು ರಕ್ಷಣಾ ವಲಯದಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಅದಕ್ಕೆಂದೆ ಎನ್‌ಎಎಲ್‌ನಲ್ಲಿರುವ ಈ ವಿಭಾಗಕ್ಕೆ ಆದ್ಯತೆ ನೀಡಿ ಪ್ರತ್ಯೇಕವಾಗಿ ಹೆಚ್ಚುವರಿ ಸ್ಥಳಾವಕಾಶ ನೀಡಲಾಗಿದೆ. ಕಂಪ್ಯೂಟರ್‌ನಲ್ಲಿ ಪ್ರಾಥಮಿಕ ಹಂತದ ವಿನ್ಯಾಸದಿಂದ ಹಿಡಿದು ಸಿದ್ಧಗೊಂಡ ಯುಎವಿ ಟೆಸ್ಟಿಂಗ್ ಹಂತದವರೆಗಿನ ಮತ್ತಷ್ಟು ಅಭಿವೃದ್ಧಿ ಮತ್ತು ಸಂಶೋಧನೆ ಆಗಬೇಕು ಎನ್ನುವ ಉದ್ದೇಶವಿದೆ. ಯುದ್ಧ ವಿಮಾನ, ಲಘು ವಿಮಾನ ಸರಸ್ ಅಭಿವೃದ್ಧಿಗೆ ನೀಡಿದಷ್ಟೇ ಮಹತ್ವವನ್ನು ಯುಎವಿ ಸಂಶೋಧನೆ ಮತ್ತು ಅಭಿವೃದ್ಧಿಗೆ ನೀಡಲಾಗುತ್ತಿದೆ'' ಎಂದು ಸಚಿವರು ಹೇಳಿದರು.

''ಗಣಿಗಳು ಸೇರಿದಂತೆ ವಿವಿಧ ರೀತಿಯ ಸ್ಥಳಗಳ ಪರಿಶೀಲನೆ, ಮೌಲ್ಯಮಾಪನ ಮಾಡಲು ಸುಚನ್ ಯುಎವಿಯನ್ನು ಬಳಕೆ ಮಾಡಲಾಗಿದೆ. ಇದರಿಂದ ಒಂದು ತಿಂಗಳ ಕೆಲಸ, ಕೇವಲ ಒಂದೇ ದಿನದಲ್ಲಿ ಆಗುತ್ತಿದೆ. ಜತೆಗೆ ನಿಖರತೆ ಮತ್ತು ಗುಣಮಟ್ಟವೂ ಹೆಚ್ಚಿದೆ. ದೇಶದ ಮಾನವ ಸಂಪನ್ಮೂಲ, ಕೆಲಸದ ಅವಧಿ ಉಳಿತಾಯವಾಗುತ್ತಿದೆ. ಈ ಮೂಲಕ ಕಡಿಮೆ ವೆಚ್ಚ ಮತ್ತು ಅವಧಿಯಲ್ಲಿ ಹೆಚ್ಚು ಕೆಲಸ ತೆಗೆಯಲು ಸಾಧ್ಯವಾಗುತ್ತಿದೆ'' ಎಂದರು.

''ದೇಶದ ಹಲವು ವಿಮಾನ ನಿಲ್ದಾಣಗಳು ವ್ಯರ್ಥವಾಗಿ ಬಿದ್ದಿದ್ದವು. ಆದರೆ, ಉಡಾನ್ ಯೋಜನೆ ಅಡಿ ಪ್ರಧಾನಿ ನರೇಂದ್ರ ಮೋದಿ ಅವರು ಅವುಗಳ ಪುನರ್ ನಿರ್ಮಾಣಕ್ಕೆ ಕೈ ಹಾಕಿ ಹಲವು ನಿಲ್ದಾಣಗಳು ಕಾರ್ಯಾರಂಭ ಮಾಡಿದ್ದಾರೆ'' ಎಂದು ಸಚಿವರು ಹೇಳಿದರು.

**ಕಾರ್ಬನ್ ಫೈಬರ್ ತಂತ್ರಜ್ಞಾನ ಖಾಸಗಿಗೆ**

''ರಾಕೆಟ್, ವಿಮಾನ ಸೇರಿದಂತೆ ಹತ್ತಾರು ಪ್ರಮುಖ ಕೆಲಸಗಳಿಗೆ ಬಳಕೆಯಾಗುವ ಕಾರ್ಬನ್ ಫೈಬರ್ ಉತ್ಪಾದನೆ ಘಟಕವೂ ಬೆಂಗಳೂರಿನ ಎನ್‌ಎಎಲ್‌ನಲ್ಲಿ ಮಾತ್ರ ಇದೆ. ಸಂಕೀರ್ಣವಾದ ತಂತ್ರಜ್ಞಾನದ ಕಾರ್ಬನ್ ಫೈಬರ್ ಉತ್ಪಾದಿಸುವ ಸಾಮರ್ಥ್ಯವನ್ನು ಕೆಲವೇ ರಾಷ್ಟ್ರಗಳು ಹೊಂದಿವೆ. ಸಾಕಷ್ಟು ವರ್ಷಗಳ ಹಿಂದೆ ಆರಂಭವಾಗಿದೆ ಈ ಘಟಕ ಆರಂಭವಾಗಿದ್ದರೂ, ಬೇರೆ ಬೇರೆ ಕಾರಣಗಳಿಂದ ನಿಂತು ಹೋಗಿತ್ತು. ಆದರೆ, ಮತ್ತೆ ಕಾರ್ಯಾರಂಭವಾಗಿದೆ. ಬರುವ ದಿನಗಳಲ್ಲಿ ಈ ತಂತ್ರಜ್ಞಾನವನ್ನು ಹೈದ್ರಾಬಾದ್‌ನಲ್ಲಿರುವ ಮಿಶ್ರ ಧಾತು ನಿಗಮ (ಮಿಧಾನಿ) ನೀಡಲಾಗುತ್ತದೆ. ಜತೆಗೆ ರಿಲಾಯನ್ಸ್ ಸೇರಿದಂತೆ ಖಾಸಗಿ ಕೈಗಾರಿಕೆಗಳು ಆಸಕ್ತಿ ತೋರಿಸಿವೆ. ತಂತ್ರಜ್ಞಾನ ವರ್ಗಾವಣೆಯಿಂದ ದೇಶಕ್ಕೆ ಸಾಕಷ್ಟು ಲಾಭವಾಗುತ್ತದೆ'' ಎಂದರು.

### ಡ್ರೋನ್ ನೀತಿಗೆ ಕಾಲಾವಕಾಶ ಬೇಕು

ವಾಣಿಜ್ಯ ಮತ್ತು ಸಾರ್ವಜನಿಕ ಬಳಕೆಯ ಮೇಲೆ ನಿಯಂತ್ರಣ ಕುರಿತ 'ಡ್ರೋನ್ ನೀತಿ' ಕುರಿತು ಪರಿಶೀಲನೆ ನಡೆಯುತ್ತಿದೆ. ಎಲ್ಲವೂ ಅಂತಿಮಗೊಂಡ ಬಳಿಕ ಸಾರ್ವಜನಿಕರ ಮುಂದೆ ಇಡುತ್ತೇವೆ ಎಂದರು.

# ಮತ್ತೆ ಸದ್ದು ಮಾಡಲಿರುವ ಪಿಟಿ2 ಲಘು ವಿಮಾನ



**ಬೆಂಗಳೂರು:** ಒಂಬತ್ತು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಸಾರಸ್ ಪಿಟಿ2 ಪುಟ್ಟ ವಿಮಾನವನ್ನು ಅಭಿವೃದ್ಧಿಪಡಿಸಲಾಗುತ್ತದೆ ಎಂದು ಕೇಂದ್ರ ಭೂವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಹರ್ಷವರ್ಧನ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಕೇಂದ್ರದ (ಸಿಎಸ್‌ಐಆರ್) ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯ ಆಯೋಜಿಸಿದ್ದ ಚಾಲಕರ ರಹಿತ ವಿಮಾನ ವಿನ್ಯಾಸ ಹಾಗೂ ಸಮಗ್ರತೆ ಸೌಲಭ್ಯ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಿಎಸ್‌ಐಆರ್ ಅಭಿವೃದ್ಧಿಪಡಿಸಿದ್ದ ಸಾರಸ್ ಪಿಟಿ2 ವಿಮಾನ 9 ವರ್ಷಗಳ ಹಿಂದೆ ಪತನಗೊಂಡಿತ್ತು. ವಾಯುಸೇನೆಯ ಮೂವರು ಸಿಬ್ಬಂದಿ ಈ ದುರ್ಘಟನೆಯಲ್ಲಿ ಮೃತಪಟ್ಟಿದ್ದರು. ಬಳಿಕ ಅದನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ಕೆ ಮುಂದಾಗಲಿಲ್ಲ.

ಆದ್ದರಿಂದ ಇದಕ್ಕೆ ಹೆಚ್ಚಿನ ಗಮನ ಹರಿಸಿ ಆಧುನೀಕರಣಗೊಳಿಸಲಾಗುತ್ತಿದ್ದು, ಮೂರು ವರ್ಷಗಳಲ್ಲಿ ವಾಣಿಜ್ಯ ಉಪಯೋಗಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ಹಾಗೆಯೇ ಉಡಾನ್ ಯೋಜನೆಯ ಮೂಲಕ ಬ್ರಿಟೀಷರ ಕಾಲದಲ್ಲಿದ್ದ ವಿಮಾನ ನಿಲ್ದಾಣಗಳನ್ನು ಪುನಶ್ಚೇತನಗೊಳಿಸಲಾಗುತ್ತದೆ ಎಂದರು.

ಚಾಲಕ ರಹಿತ ವಿಮಾನಗಳ ತಯಾರಿ ಮೂಲಕ ಮಾನವ ಸಂಪನ್ಮೂಲವನ್ನು ಉಳಿಕೆ ಮಾಡಬಹುದಾಗಿದೆ. ಈ ಮೂಲಕ ದೇಶದ ಅಭಿವೃದ್ಧಿ ದರ ಹೆಚ್ಚಾಗಲಿದೆ. ಈಗಾಗಲೇ ಕೆಲ ದೇಶಗಳು ಈ ತಂತ್ರಜ್ಞಾನ ಬಳಕೆ ಮಾಡಿಕೊಂಡು ಸಾಕಷ್ಟು ಸುಧಾರಣೆಯಾಗಿವೆ. ಒಂದು ತಿಂಗಳಲ್ಲಿ ಮಾಡಬೇಕಾದ ಕೆಲಸ ಒಂದು ದಿನದಲ್ಲಿ ಈ ತಂತ್ರಜ್ಞಾನ ಮುಗಿಸುತ್ತದೆ ಎಂದು ಹೇಳಿದರು.

## ಯುಎವಿ ವಿನ್ಯಾಸ ಕೇಂದ್ರದಲ್ಲಿ ಏನಿದೆ?

- ವಿಮಾನದ ವಿನ್ಯಾಸ ಮತ್ತು ಬಿಡಿ ಭಾಗಗಳ ತಯಾರಿಕೆ
- ಇಂಟಿಗ್ರೇಷನ್ ಮತ್ತು ಟೆಸ್ಟಿಂಗ್
- ಎವಾನಿಕ್ಸ್ ಟೆಸ್ಟಿಂಗ್ ಮತ್ತು ತಂತ್ರಜ್ಞಾನದ ಪರಿಶೀಲನೆ
- ರ‍್ಯಾಪಿಡ್ ಪೋಟೋಗ್ರಾಫಿ, ಸಿಎಇ ಸಾಫ್ಟ್‌ವೇರ್
- ಸಿಮ್ಯುಲೇಶನ್ ಪೇಲೋಡ್, ಏರ್ ಫ್ರೇಮ್

## ಕಾರ್ಬನ್ ಫೈಬರ್ ತಯಾರಿಕೆಗೆ ರಿಲಾಯನ್ಸ್ ಕಂಪನಿ ಸಜ್ಜು

ಸುಮಾರು ವರ್ಷಗಳ ಹಿಂದೆ ಕಾರ್ಬನ್ ಫೈಬರ್ ತಯಾರಿಸಲಾಗುತ್ತಿತ್ತು. ಕೆಲವೊಂದು ಕಾರಣಾಂತರಗಳಿಂದ ಅದನ್ನು ಸ್ಥಗಿತಗೊಳಿಸಲಾಯಿತು. ಮೂರ್ನಾಲ್ಕು ದೇಶಗಳನ್ನು ಹೊರತುಪಡಿಸಿದರೆ ಯಾವುದೇ ದೇಶ ಕಾರ್ಬನ್ ಫೈಬರ್ ತಯಾರಿಕೆಗೆ ಆಸಕ್ತಿ ತೋರುತ್ತಿಲ್ಲ. ಈಗ ರಿಲಾಯನ್ಸ್ ಕಂಪನಿ ಇದನ್ನು ತಯಾರಿಸಲು ಮುಂದಾಗುತ್ತಿದೆ. ನಮ್ಮ ದೇಶದಲ್ಲಿ ಇದನ್ನು ತಯಾರಿಸಲು ಸಿಎಸ್‌ಐಆರ್ ಮತ್ತು ಎನ್‌ಎಎಲ್ ಆಸಕ್ತಿ ತೋರಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಚಾಲಕ ರಹಿತ ವಿಮಾನದಲ್ಲಿ ಸಾಕಷ್ಟು ತಾಂತ್ರಿಕ ಮಾರ್ಪಾಡು ಮತ್ತು ವಿನ್ಯಾಸದಲ್ಲಿ ಸುಧಾರಣೆ ಮಾಡಲಾಗಿದೆ. ಈ ತಂತ್ರಜ್ಞಾನವನ್ನು ಕೃಷಿ, ಅರಣ್ಯ, ಗಣಿ ಹಾಗೂ ನಿಗಾ ಕೇಂದ್ರಗಳಲ್ಲಿ ಬಳಸಬಹುದಾಗಿದ್ದು, ಎಲ್ಲಾ ಮಾಹಿತಿಗಳನ್ನು ತತ್ ಕ್ಷಣದಲ್ಲಿ ಪಡೆಯಬಹುದಾಗಿದೆ. ಕಾರ್ಬನ್ ಫೈಬರ್‌ಗೆ ವಿಮಾನ, ರಕ್ಷಣಾ, ಆಟೋಮೋಟಿವ್ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಹೆಚ್ಚು ಬೇಡಿಕೆ ಬರುತ್ತಿರುವುದರಿಂದ ಹೆಚ್ಚಾಗಿ ತಯಾರಿಸಲಾಗುತ್ತದೆ.

– **ಜಿತೇಂದ್ರ ಜಾಧವ** ನ್ಯಾಷನಲ್ ಏರೋನಾಟಿಕ್ಸ್ ನಿರ್ದೇಶಕ.